2016 ಕ.ತೀ.ವ 1098

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.

ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದ ಅಧ್ಯಕ್ಷರು ಮತ್ತು ಇನ್ನೊಬ್ಬರು –ವಿರುದ್ಧ– ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಹಾಗೂ ಇತರರು*

ಎ) ಉಪದಾನ ಸಂದಾಯ ಅಧಿನಿಯಮ, 1972 – ಪ್ರಕರಣ 2 (ಎಫ್) ಉದ್ಯೋಗದಾತ – ಅರ್ಥ ವಿವರಣೆ: ಈ ಮೇಲಿನ ಪರಿಭಾಷೆಯಿಂದ ಉದ್ಯೋಗದಾತನು ಕಾರ್ಯಸಂಸ್ಥೆ, ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು, ರೈಲ್ವೆ ಕಂಪನಿ ಅಥವಾ ಅಂಗಡಿ ಇತ್ಯಾದಿ ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣ ಹೊಂದಿರುವ ವ್ಯಕ್ತಿ, ಅಥವಾ ಪ್ರಾಧಿಕಾರ ಹಾಗೂ ಕಾರ್ಯಸಂಸ್ಥೆ, ಇತ್ಯಾದಿಯ ವ್ಯವಹಾರಗಳನ್ನು ವಹಿಸಲಾದ ಮ್ಯಾನೇಜರ್, ಮ್ಯಾನೇಜಿಂಗ್ ಡೈರೆಕ್ಟರ್‌ನಂಥ ಯಾರೇ ಇತರ ವ್ಯಕ್ತಿ ಎಂಬುದು ಸ್ಪಷ್ಟವಾಗಿದೆ. ಆದುದರಿಂದ, ಯಾರು ಕಾರ್ಯಸಂಸ್ಥೆಯ ವ್ಯವಹಾರಗಳ ಅಂತಿಮ ನಿಯಂತ್ರಣ ಹೊಂದಿದ್ದರೋ ಅಥವಾ ನೌಕರರ ಉದ್ಯೋಗಾವಧಿಯಲ್ಲಿ ಕಾರ್ಯಸಂಸ್ಥೆಯ ವ್ಯವಸ್ಥಾಪನೆಯನ್ನು ಮಾಡುತ್ತಿದ್ದರೋ ಅವರನ್ನು ಉಪದಾನ ಸಂದಾಯದ ಉದ್ದೇಶಕ್ಕಾಗಿ ಉದ್ಯೋಗದಾತನೆಂದು ಪರಿಗಣಿಸಬೇಕೆಂದು ಅಗತ್ಯಪಡಿಸಲಾಗಿದೆ ಎಂದು ತೀರ್ಮಾನಿಸಲಾಗಿದೆ.

ಬಿ) ಉಪದಾನ ಸಂದಾಯ ಅಧಿನಿಯಮ, 1972 – ಉಪದಾನ ಸಂದಾಯ 3 ಮತ್ತು 4ನೇ ಪ್ರತ್ಯಪೀಲುದಾರರು ಮೊದಲನೇ ಅಪೀಲುದಾರನ ಬಳಿ ಕೆಲಸ ಮಾಡುತ್ತಿದ್ದರು – ಸಿಬ್ಬಂದಿಯ ವ್ಯವಹಾರಗಳ ಮೇಲಿನ ಅಂತಿಮ ನಿಯಂತ್ರಣವು ಮೊದಲನೇ ಅಪೀಲುದಾರರದಾಗಿತ್ತು – ಮೊದಲ ಅಪೀಲುದಾರನ ಕಾರ್ಯ ಸಂಸ್ಥೆಯು ಮೊದಲನೇ

*ರಿಟ್ ಅರ್ಜಿ ಸಂ: 100121/2015, (ಎಲ್–ಪಿಜಿ) ದಿನಾಂಕ: 10ನೇ ಡಿಸೆಂಬರ್, 2015.

ಪ್ರತ್ಯಪೀಲುದಾರರಿಗೆ ವರ್ಗಾವಣೆಗೊಂಡಿತು – 3 ಮತ್ತು 4ನೇ ಪ್ರತ್ಯಪೀಲುದಾರರು ಉಪದಾನ ಕೋರಿ ಅಪೀಲುದಾರರಿಗೆ ಮಾಡಿದ ಮನವಿ – ಉಪದಾನವನ್ನು ಸಂದಾಯ ಮಾಡಲು ಅಪೀಲುದಾರರ ಹೊಣೆಗಾರಿಕೆ – ಮೊದಲನೇ ಪ್ರತ್ಯಪೀಲುದಾರನು 3 ಮತ್ತು 4ನೇ ಪ್ರತ್ಯಪೀಲುದಾರರಿಗೆ ಅವರ ಪ್ರಾರಂಭಿಕ ನೇಮಕಾತಿಯ ದಿನಾಂಕದಿಂದ ಮೊದಲನೇ ಪ್ರತ್ಯಪೀಲುದಾರರ ಬಳಿಗೆ ವರ್ಗಾವಣೆಗೊಳ್ಳುವ ದಿನಾಂಕದವರೆಗೆ ಅವರ ಉದ್ಯೋಗದಾತನಾಗಿರಲಿಲ್ಲ.

3 ಮತ್ತು 4ನೇ ಪ್ರತ್ಯಪೀಲುದಾರರು ಮೊದಲ ಅಪೀಲುದಾರನೊಂದಿಗೆ ಕೆಲಸ ಮಾಡುತ್ತಿದ್ದಷ್ಟು ಕಾಲವೂ ಕಾರ್ಯ ಸಂಸ್ಥೆಯ ವ್ಯವಹಾರಗಳ ಮೇಲಿನ ಅಂತಿಮ ನಿಯಂತ್ರಣವು 1ನೇ ಅಪೀಲುದಾರನದಾಗಿತ್ತು. ಸದರಿ ಕಾರ್ಯ ಸಂಸ್ಥೆಯನ್ನು ಮೊದಲನೇ ಪ್ರತ್ಯಪೀಲುದಾರನಿಗೆ ಹಸ್ತಾಂತರಿಸಿದ ನಂತರವೇ ಅಂದರೆ, 9.10.2003ರಿಂದ ಜಾರಿಗೆ ಬರುವಂತೆ, ಮೊದಲ ಪ್ರತ್ಯಪೀಲುದಾರನು ಉದ್ಯೋಗದಾತನಾಗಿದ್ದಾನೆ. ಆದುದರಿಂದ ಮೊದಲ ಅಪೀಲುದಾರನು 3 ಮತ್ತು 4ನೇ ಪ್ರತ್ಯಪೀಲುದಾರರ ಪ್ರಾರಂಭಿಕ ನೇಮಕಾತಿ ದಿನಾಂಕದಿಂದ ಕಾರ್ಯ ಸಂಸ್ಥೆಯನ್ನು ಮೊದಲನೇ ಪ್ರತ್ಯಪೀಲುದಾರನಿಗೆ ವರ್ಗಾಯಿಸುವವರೆಗೂ ಅವರ ಉದ್ಯೋಗದಾತನಾಗಿದ್ದಾನೆ. ಆದುದರಿಂದ, ಮಾನ್ಯ ಏಕ ಸದಸ್ಯ ಪೀಠ ನ್ಯಾಯಾಧೀಶರು, ಅಪೀಲುದಾರರಿಂದ 3 ಮತ್ತು 4ನೇ ಪ್ರತ್ಯಪೀಲುದಾರರಿಗೆ ಅವರ ಪ್ರಾರಂಭಿಕ ನೇಮಕಾತಿ ದಿನಾಂಕದಿಂದ 9.10.2013ರವರೆಗೆ ಉಪದಾನ ಸಂದಾಯ ಮಾಡಬೇಕೆಂದು ಸರಿಯಾಗಿಯೇ ನಿರ್ದೇಶಿಸಿದ್ದಾರೆ.

ರಿಟ್ ಅಪೀಲನ್ನು ವಜಾಗೊಳಿಸಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆ* *ಪ್ಯಾರಾದಲ್ಲಿ*

*1. 1922* II ಎಲ್ಎಲ್‌ಜೆ III
*ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್*
*(ಸೌತ್ ಮಹಾರಾಷ್ಟ್ರ) ಲಿಮಿಟೆಡ್ –ವಿರುದ್ಧ–*
*ಭಾಗೀರಥಿ ಗೋಪಾಲ್ ಮಾರ್ಟಲ್ ಮತ್ತು ಇತರರು* *ಉಲ್ಲೇ (9)*

ಅಪೀಲುದಾರರ ಪರ: ಶ್ರೀ ಪ್ರಕಾಶ್ ಎಸ್. ಉಡಿಕೇರಿ, ವಕೀಲರು.
1ನೇ ಪ್ರತ್ಯಪೀಲುದಾರರ ಪರ: ಶ್ರೀ ಮಹೇಶ್ ಒಡೆಯರ್, ವಕೀಲರು.
2 ಮತ್ತು 3ನೇ ಪ್ರತ್ಯಪೀಲುದಾರರ ಪರ: ಶ್ರೀ ಎಸ್.ಎಲ್. ಮಟ್ಟಿ, ವಕೀಲರು.
4 ಹಾಗೂ 5ನೇ ಪ್ರತ್ಯಪೀಲುದಾರರ ಪರ: ಶ್ರೀ ಎಂ.ಬಿ. ಕಣವಿ, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್:**

ಈ ಅಪೀಲನ್ನು ರಿಟ್ ಅರ್ಜಿ ಸಂಖ್ಯೆ 104050/2014, ದಿನಾಂಕ 24.7.2014ರ ಆದೇಶದ ವಿರುದ್ಧ ನಿರ್ದೇಶಿಸಲಾಗಿದ್ದು, ಆ ಮೂಲಕ ಮಾನ್ಯ ಏಕ ಪೀಠ ನ್ಯಾಯಾಧೀಶರು, 3 ಮತ್ತು 4ನೇ ಪ್ರತ್ಯಪೀಲುದಾರರಿಗೆ ಅವರ ಪ್ರಾರಂಭಿಕ ನೇಮಕಾತಿಯ ದಿನಾಂಕದಿಂದ 9.10.2003ರ ವರೆಗೆ ವಾರ್ಷಿಕ ಶೇ.10ರ ಬಡ್ಡಿಯೊಂದಿಗೆ ಉಪದಾನ ಸಂದಾಯ ಮಾಡಲು ಅಪೀಲುದಾರರಿಗೆ ನಿರ್ದೇಶಿಸಿದ್ದಾರೆ.

2. ಇದರಲ್ಲಿ 1ನೇ ಅಪೀಲುದಾರರಾದ ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದಿಂದ ನಡೆಸಲಾಗುವ ಧಾರವಾಡದ ನಗರ ಕುಟುಂಬ ಕಲ್ಯಾಣ ಕೇಂದ್ರ ಸಂಖ್ಯೆ 2 ರಲ್ಲಿ 3 ಮತ್ತು 4ನೇ ಪ್ರತ್ಯಪೀಲುದಾರರನ್ನು ಅನುಕ್ರಮವಾಗಿ ಫ್ಯಾಮಿಲ್ ಪ್ಲಾನಿಂಗ್ ಫೀಡ್ ವರ್ಕರ್ (ಸಂಕ್ಷಿಪ್ತವಾಗಿ ಎಫ್‌ಪಿಎಫ್‌ಡಬ್ಲ್ಯು) ಮತ್ತು ಆ್ಯಕ್ಸಿಲರಿ ನರ್ಸರಿ ಮಿಡ್‌ವೈವ್ಸ್ (ಸಂಕ್ಷಿಪ್ತವಾಗಿ 'ಎಎನ್‌ಎಂ') ಎಂಬುದಾಗಿ ನೇಮಕ ಮಾಡಲಾಯಿತು. ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದ ಧಾರವಾಡ ಶಾಖೆಯಲ್ಲಿ ದಿನಾಂಕ 6.9.2003ರ ಅನುಬಂಧ 'ಎಫ್'ನಲ್ಲಿ ಸರ್ಕಾರಿ ಆದೇಶದಲ್ಲಿರುವಂತೆ ಕೇಂದ್ರದ ಸಿಬ್ಬಂದಿಯೊಂದಿಗೆ ಇದರಲ್ಲಿನ 1ನೇ ಪ್ರತ್ಯಪೀಲುದಾರರಾದ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯು ವಹಿಸಿಕೊಂಡಿರುತ್ತದೆ. ಧಾರವಾಡದ ಸಮಗ್ರ ನಗರ ಕುಟುಂಬ ಕಲ್ಯಾಣ ಕೇಂದ್ರ ಸಂಖ್ಯೆ 2 ನ್ನು ಈಗಿರುವ ಸಿಬ್ಬಂದಿಯೊಂದಿಗೆ, ಅದರ ಕಾರ್ಯಚಟುವಟಿಕೆಗಳು ಹಾಗೂ ಆಸ್ತಿಗಳನ್ನು 1ನೇ ಪ್ರತ್ಯಪೀಲುದಾರರಿಗೆ ದಿನಾಂಕ 9.10.2003ರಂದು ವಾಸ್ತವಿಕವಾಗಿ

ಹಸ್ತಾಂತರಿಸಿರುತ್ತಾರೆ. ಹೀಗಾಗಿ 3 ಮತ್ತು 4ನೇ ಪ್ರತ್ಯಪೀಲುದಾರರ ಸೇವೆಗಳನ್ನು ದಿನಾಂಕ 9.10.2003ರಂದು 1ನೇ ಪ್ರತ್ಯಪೀಲುದಾರರಿಗೆ ವರ್ಗಾಯಿಸಲಾಗಿರುತ್ತದೆ. ಅವರು ವಯೋನಿವೃತ್ತಿ ಹೊಂದುವ ಮೂಲಕ ಅನುಕ್ರಮವಾಗಿ ದಿನಾಂಕ 28.2.2005 ಮತ್ತು 31.7.2004ರಂದು ನಿವೃತ್ತರಾಗಿರುತ್ತಾರೆ. ಅವರು ಉಪದಾನ ಸಂದಾಯಕ್ಕಾಗಿ ಅಪೀಲುದಾರರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಯನ್ನು ಪರಿಗಣಿಸದಿದ್ದ ಕಾರಣಕ್ಕಾಗಿ ಅವರು ಉಪದಾನ ಸಂದಾಯ ಮಾಡಬೇಕೆಂದು ನಿರ್ದೇಶಿಸಲು ಕೋರಿ, ರಿಟ್ ಅರ್ಜಿ ಸಂಖ್ಯೆ 17811/2007ನ್ನು ಸಲ್ಲಿಸಿರುತ್ತಾರೆ. ಈ ನ್ಯಾಯಾಲಯವು ದಿನಾಂಕ 14.1.2008ರ ಆದೇಶದ ಮೂಲಕ ಸೂಕ್ತ ಪರಿಹಾರಗಳಿಗಾಗಿ ಉಪದಾನ ಸಂದಾಯ ಅಧಿನಿಯಮ, 1972ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಅಡಿಯಲ್ಲಿ ನಿಯಂತ್ರಣಾ ಪ್ರಾಧಿಕಾರದ ಮೊರೆ ಹೋಗಲು ಅರ್ಜಿದಾರರಿಗೆ ನಿರ್ದೇಶಿಸಿದೆ.

3. ಉಪದಾನದ ನಿರ್ಧಾರಕ್ಕಾಗಿ ಮತ್ತು ವಾರ್ಷಿಕ ಶೇ.18ರಷ್ಟು ಬಡ್ಡಿಯೊಂದಿಗೆ ಉಪದಾನವನ್ನು ಪಾವತಿಸಲು ಅಪೀಲುದಾರರಿಗೆ ಮತ್ತು ಮೊದಲನೇ ಪ್ರತ್ಯಪೀಲುದಾರರಿಗೆ ನಿರ್ದೇಶಿಸಲು ನಿಯಂತ್ರಣಾ ಪ್ರಾಧಿಕಾರದ ಮುಂದೆ 3 ಮತ್ತು 4ನೇ ಪ್ರತ್ಯಪೀಲುದಾರರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಿಯಂತ್ರಣಾ ಪ್ರಾಧಿಕಾರವು, ಅಪೀಲುದಾರರು ಆದೇಶದ ದಿನಾಂಕದಿಂದ 30 ದಿನಗಳ ಅವಧಿಯೊಳಗಾಗಿ ವಾರ್ಷಿಕ ಶೇ.10ರಷ್ಟು ಬಡ್ಡಿಯೊಂದಿಗೆ ಉಪದಾನ ಸಂದಾಯ ಮಾಡಲು ಬದ್ಧರಾಗಿದ್ದಾರೆಂದು ತೀರ್ಮಾನಿಸಿ, ದಿನಾಂಕ 31.1.2012ರ ಅನುಬಂಧ 'ಎನ್' ನಲ್ಲಿ ಆದೇಶವನ್ನು ಹೊರಡಿಸಿದೆ. 1ನೇ ಅಪೀಲುದಾರರು ಬೆಂಗಳೂರಿನ ಉಪದಾನ ಸಂದಾಯದ ಅಪೀಲು ಪ್ರಾಧಿಕಾರ ಮತ್ತು ಪ್ರಾದೇಶಿಕ ಕಾರ್ಮಿಕ ಆಯುಕ್ತರ ಮುಂದೆ ಅಪೀಲನ್ನು ಸಲ್ಲಿಸುವ ಮೂಲಕ ಸದರಿ ಆದೇಶವನ್ನು ಪ್ರಶ್ನಿಸಿದ್ದಾರೆ. ಅಪೀಲು ಪ್ರಾಧಿಕಾರಿಯು ದಿನಾಂಕ 16.12.2013ರ ಅನುಬಂಧ 'ಎ'ಯಲ್ಲಿ ತನ್ನ ಆದೇಶದ ಮೂಲಕ ಉಪದಾನ ಸಂದಾಯ ಮಾಡಲು 1ನೇ ಪ್ರತ್ಯಪೀಲುದಾರರಿಗೆ ನಿರ್ದೇಶಿಸಿದ್ದಾರೆ. ಈ ಆದೇಶವನ್ನು ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ 1ನೇ ಪ್ರತ್ಯಪೀಲುದಾರರು ಪ್ರಶ್ನಿಸಿದ್ದಾರೆ. ಮೇಲೆ ಗಮನಿಸಲಾದಂತೆ, ಮಾನ್ಯ ಏಕಪೀಠ ನ್ಯಾಯಾಧೀಶರು ರಿಟ್ ಅರ್ಜಿಯನ್ನು ಪುರಸ್ಕರಿಸಿದ್ದಾರೆ ಮತ್ತು ವಾರ್ಷಿಕ ಶೇ.10ರಷ್ಟು ಬಡ್ಡಿಯೊಂದಿಗೆ ಅವರ ಪ್ರಾರಂಭಿಕ ನೇಮಕಾತಿಯ ದಿನಾಂಕದಿಂದ

9.10.2003ರ ವರೆಗೆ 3 ಮತ್ತು 4ನೇ ಪ್ರತ್ಯಪೀಲುದಾರರಿಗೆ ಉಪದಾನ ಸಂದಾಯ ಮಾಡಲು ಇದರಲ್ಲಿನ ಅಪೀಲುದಾರರಿಗೆ ನಿರ್ದೇಶಿಸಿದ್ದಾರೆ.

4. ಅಪೀಲುದಾರರ ಪರ ಮಾನ್ಯ ವಕೀಲರ ವಾದವೆಂದರೆ, ಅಪೀಲುದಾರರು 3 ಮತ್ತು 4ನೇ ಪ್ರತ್ಯಪೀಲುದಾರರಿಗೆ ಉಪದಾನ ಸಂದಾಯ ಮಾಡಲು ಬದ್ಧರಾಗಿಲ್ಲ ಎಂಬುದಾಗಿದೆ. 3 ಮತ್ತು 4ನೇ ಪ್ರತ್ಯಪೀಲುದಾರರು ಸೇವೆಯಿಂದ ಅವರ ನಿವೃತ್ತಿಯ ಸಮಯದಲ್ಲಿ 1ನೇ ಪ್ರತ್ಯಪೀಲುದಾರರ ಬಳಿ ಕೆಲಸ ಮಾಡುತ್ತಿದ್ದುದರಿಂದ 1ನೇ ಪ್ರತ್ಯಪೀಲುದಾರರು ಉದ್ಯೋಗದಾತರಾಗಿದ್ದಾರೆಂದು ವಾದಿಸಲಾಗಿದೆ. ಉಪದಾನ ಸಂದಾಯ ಮಾಡುವ ಹೊಣೆಗಾರಿಕೆಯು ಅವರ ನಿವೃತ್ತಿಯ ದಿನಾಂಕದಿಂದ ಪ್ರಾಪ್ತವಾಗಿರುತ್ತದೆ. ಅದನ್ನು ಅಪೀಲುದಾರರ ವಿರುದ್ಧ ಜಾರಿಗೊಳಿಸಲಾಗುವುದಿಲ್ಲ.

5. ಮತ್ತೊಂದು ಕಡೆ, ಪ್ರತ್ಯಪೀಲುದಾರರ ಪರ ಹಾಜರಾದ ಮಾನ್ಯ ವಕೀಲರು, ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದ ಧಾರವಾಡ ಶಾಖೆಗೆ ನೌಕರರ ಪ್ರಾರಂಭಿಕ ನೇಮಕಾತಿಯಿಂದ ವರ್ಗಾವಣೆ ದಿನಾಂಕದವರೆಗೆ ಉದ್ಯೋಗದಾತರಾಗಿರದಿದ್ದ ಕಾರಣ 1ನೇ ಪ್ರತ್ಯಪೀಲುದಾರರು ಉಪದಾನ ಸಂದಾಯ ಮಾಡಲು ಬದ್ಧರಾಗಿರುವುದಿಲ್ಲವೆಂದು ನಿವೇದಿಸಿದ್ದಾರೆ. ಆದುದರಿಂದ, ಮಾನ್ಯ ಏಕಪೀಠ ನ್ಯಾಯಾಧೀಶರು ಅಪೀಲುದಾರರಿಗೆ ಅವರ ನೇಮಕಾತಿಯ ದಿನಾಂಕದಿಂದ ಅದನ್ನು ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಗೆ ಹಸ್ತಾಂತರಿಸುವ ದಿನಾಂಕದವರೆಗೆ ಉಪದಾನವನ್ನು ಸಂದಾಯ ಮಾಡಲು ಸರಿಯಾಗಿಯೇ ನಿರ್ದೇಶಿಸಿದ್ದಾರೆ.

6. 3 ಮತ್ತು 4ನೇ ಪ್ರತ್ಯಪೀಲುದಾರರು ಫ್ಯಾಮಿಲಿ ಅಸೋಸಿಯೇಷನ್ ಆಫ್ ಇಂಡಿಯಾದ ಧಾರವಾಡ ಶಾಖೆಯಲ್ಲಿ ಅನುಕ್ರಮವಾಗಿ 2.2.1976ರಿಂದ ಮತ್ತು 12.2.1977ರಿಂದ ಅದು ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಗೆ ವರ್ಗಾವಣೆಯಾಗುವವರೆಗೆ ಸೇವೆ ಸಲ್ಲಿಸಿರುತ್ತಾರೆ ಎಂಬುದು ನಿರ್ವಿವಾದಿತ ಸಂಗತಿಯಾಗಿದೆ. 3 ಮತ್ತು 4ನೇ ಪ್ರತ್ಯಪೀಲುದಾರರ ಪ್ರಾರಂಭಿಕ ನೇಮಕಾತಿಯ ದಿನಾಂಕದಿಂದ 9.10.2003ರ ವರೆಗೆ ಉಪದಾನ ಸಂದಾಯಕ್ಕೆ ಸಂಬಂಧಿಸಿದಂತೆ ವಿವಾದವುಂಟಾಗಿದೆ.

7. 'ಉದ್ಯೋಗದಾತ' ಎಂಬ ಪದವನ್ನು ಉಪದಾನ ಸಂದಾಯ ಅಧಿನಿಯಮ, 1972ರ 2ನೇ ಪ್ರಕರಣದ (ಎಫ್) ಉಪ–ಪ್ರಕರಣದಡಿಯಲ್ಲಿ ಪರಿಭಾಷಿಸಲಾಗಿದೆ. 2ಎಫ್ (i) ಮತ್ತು (ii)ನೇ ಪ್ರಕರಣಗಳು ಈ ಮೊಕದ್ದಮೆಗೆ ಅನ್ವಯವಾಗುವುದಿಲ್ಲ. 2 (ಎಫ್) (ii) ಪ್ರಕರಣವು ಸದ್ಯದ ಪ್ರಕರಣಕ್ಕೆ ಅನ್ವಯವಾಗಿದ್ದು, ಅದು ಈ ಕೆಳಗಿನಂತಿದೆ:

> "**ಪ್ರಕರಣ 2(ಎಫ್)** 'ಉದ್ಯೋಗದಾತ' ಎಂದರೆ ಯಾವುದೇ ಕಾರ್ಯಸಂಸ್ಥೆ, ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು, ರೈಲ್ವೆ ಕಂಪನಿ ಅಥವಾ ಅಂಗಡಿ (ಶಾಪ್)–
>
> (i) xxxx xxxx xxxx
>
> (ii) xxxx xxxx xxxx
>
> (iii) ಯಾವುದೇ ಇತರ ಪ್ರಕರಣದಲ್ಲಿ, ಕಾರ್ಯಸಂಸ್ಥೆ, ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು, ರೈಲ್ವೆ ಕಂಪನಿ ಅಥವಾ ಅಂಗಡಿಯ **ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣ ಹೊಂದಿರುವಂಥ** ವ್ಯಕ್ತಿ ಅಥವಾ ಪ್ರಾಧಿಕಾರ ಮತ್ತು ಸದರಿ ವ್ಯವಹಾರಗಳನ್ನು ಮ್ಯಾನೇಜರ್, ಮ್ಯಾನೇಜಿಂಗ್ ಡೈರೆಕ್ಟರ್ ಅಥವಾ ಯಾವುದೇ ಇತರ ಹೆಸರಿನಿಂದ, ಅಂಥ ವ್ಯಕ್ತಿಗೆ ವಹಿಸಲಾಗಿರುವಲ್ಲಿ ಅಂತಿಮ ನಿಯಂತ್ರಣ ಹೊಂದಿರುವ ವ್ಯಕ್ತಿ.

8. ಈ ಮೇಲಿನ ಪರಿಭಾಷೆಯಿಂದ ಉದ್ಯೋಗದಾತನು ಕಾರ್ಯಸಂಸ್ಥೆ, ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು, ರೈಲ್ವೆ ಕಂಪನಿ ಅಥವಾ ಅಂಗಡಿ ಇತ್ಯಾದಿ ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣ ಹೊಂದಿರುವ ವ್ಯಕ್ತಿ, ಅಥವಾ ಪ್ರಾಧಿಕಾರ ಹಾಗೂ ಕಾರ್ಯಸಂಸ್ಥೆ, ಇತ್ಯಾದಿಯ ವ್ಯವಹಾರಗಳನ್ನು ವಹಿಸಲಾದ ಮ್ಯಾನೇಜರ್, ಮ್ಯಾನೇಜಿಂಗ್ ಡೈರೆಕ್ಟರ್‌ನಂಥ ಯಾರೇ ಇತರ ವ್ಯಕ್ತಿ

ಎಂಬುದು ಸ್ಪಷ್ಟವಾಗಿದೆ. ಆದುದರಿಂದ, ಯಾರು ಕಾರ್ಯಸಂಸ್ಥೆಯ ವ್ಯವಹಾರಗಳ ಅಂತಿಮ ನಿಯಂತ್ರಣ ಹೊಂದಿದ್ದರೋ ಅಥವಾ ನೌಕರರ ಉದ್ಯೋಗಾವಧಿಯಲ್ಲಿ ಕಾರ್ಯಸಂಸ್ಥೆಯ ವ್ಯವಸ್ಥಾಪನೆಯನ್ನು ಮಾಡುತ್ತಿದ್ದರೋ ಅವರನ್ನು ಉಪದಾನ ಸಂದಾಯದ ಉದ್ದೇಶಕ್ಕಾಗಿ ಉದ್ಯೋಗದಾತನೆಂದು ಪರಿಗಣಿಸಬೇಕೆಂದು ಅಗತ್ಯಪಡಿಸಲಾಗಿದೆ.

9. ***ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೋರೇಷನ್ (ಸೌತ್ ಮಹಾರಾಷ್ಟ್ರ) ಲಿಮಿಟೆಡ್ –ವಿರುದ್ಧ– ಭಾಗೀರಥಿ ಗೋಪಾಲ್ ಮಾರ್ಟಲ್ ಮತ್ತು ಇತರರು*** [1], ಪ್ರಕರಣದಲ್ಲಿ ಬಾಂಬೆ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಅದೇ ರೀತಿಯ ಪ್ರಶ್ನೆಯನ್ನು ಪರ್ಯಾಲೋಚಿಸಿತು. ಸದರಿ ಮೊಕದ್ದಮೆಯಲ್ಲಿ ನೌಕರನು ಬಟ್ಟೆ ಗಿರಣಿಯಲ್ಲಿ (ಟೆಕ್ಸ್‌ಟೈಲ್ ಮಿಲ್) ಉದ್ಯೋಗಿಯಾಗಿದ್ದನು. ಅವನು 1.4.1983ರಲ್ಲಿ ನಿವೃತ್ತನಾದನು. ಅವನಿಗೆ ಬಾಕಿಯಿದ್ದ ಉಪದಾನವನ್ನು ಬಟ್ಟೆ ಮಿಲ್ ಸಂದಾಯ ಮಾಡದಿದ್ದ ಕಾರಣ, ಅವನು ಸಂದಾಯಕ್ಕಾಗಿ ನಿಯಂತ್ರಣಾ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿದ್ದಾನೆ. ಬಟ್ಟೆ ಮಿಲ್‌ನ ಆಡಳಿತ ವರ್ಗವನ್ನು ಅಕ್ಟೋಬರ್ 18, 1983ರಂದು ಕೇಂದ್ರ ಸರ್ಕಾರವು ವಹಿಸಿಕೊಂಡಿತು. ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೋರೇಷನ್ ಅನ್ನು ನಿಯಂತ್ರಣಾ ಪ್ರಾಧಿಕಾರದ ಮುಂದಿನ ವ್ಯವಹರಣೆಗಳಲ್ಲಿ ಪಕ್ಷಕಾರರನ್ನಾಗಿ ಮಾಡಲಾಯಿತು. ನಿಯಂತ್ರಣಾ ಪ್ರಾಧಿಕಾರವು ಬಟ್ಟೆ ಮಿಲ್‌ನ ವಿರುದ್ಧವಾಗಿ ಕ್ಲೇಮನ್ನು ಪುರಸ್ಕರಿಸಿದೆ ಮತ್ತು ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೋರೇಷನ್ ವಿರುದ್ಧದ ಕ್ಲೇಮನ್ನು ವಜಾ ಮಾಡಿದೆ. ನೌಕರನು ಮರಣ ಹೊಂದಿದ ಕಾರಣದಿಂದಾಗಿ, ಅವನ ಪತ್ನಿಯು ನಿಯಂತ್ರಣಾ ಪ್ರಾಧಿಕಾರದ ಆದೇಶವನ್ನು ಪ್ರಶ್ನಿಸಿದ್ದಾಳೆ. ಆಕೆಯ ಪ್ರಕಾರ, ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೋರೇಷನ್ ಸಹ ಉಪದಾನ ಸಂದಾಯ ಮಾಡಲು ಬದ್ಧವಾಗಿದೆ. ಅಪೀಲು ಪ್ರಾಧಿಕಾರವು ಕ್ಲೇಮನ್ನು ಅಂಗೀಕರಿಸಿದೆ ಮತ್ತು ಬಟ್ಟೆ ಮಿಲ್ ಉಪದಾನವನ್ನು ಶೇವಣಿ ಮಾಡಲು ವಿಫಲವಾದ ಸಂದರ್ಭದಲ್ಲಿ ಬಟ್ಟೆ ಮಿಲ್‌ನ ಆಸ್ತಿಗಳು ಮತ್ತು ಇತರ ಸ್ವತ್ತುಗಳನ್ನು ವಹಿಸಿಕೊಳ್ಳುವ ಮಟ್ಟಿಗೆ, ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೋರೇಷನ್‌ನಿಂದ ಮೊತ್ತವನ್ನು ವಸೂಲಿ ಮಾಡಲು ಅವಕಾಶವಿರತಕ್ಕದ್ದು ಎಂದು ತೀರ್ಮಾನಿಸಿದೆ. ನ್ಯಾಷನಲ್ ಟೆಕ್ಸ್‌ಟೈಲ್ಸ್

1. 1922 II ಎಲ್‌ಎಲ್‌ಜೆ III

ಕಾರ್ಪೋರೇಷನ್ ವಿಭಾಗೀಯ ಪೀಠದ ಮುಂದೆ ಈ ಆದೇಶವನ್ನು ಪ್ರಶ್ನಿಸಿದೆ. ವಿಭಾಗೀಯ ಪೀಠವು, ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೋರೇಷನ್ ಉದ್ಯೋಗದಾತನೆಂದು ಪರಿಗಣಿಸಲಾಗುವುದಿಲ್ಲ ಮತ್ತು ಅದಕ್ಕೆ ಉಪದಾನ ಸಂದಾಯ ಮಾಡುವ ಹೊಣೆಗಾರಿಕೆಯನ್ನು ಹೊರಿಸಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. ಅದು ಈ ಮುಂದಿನಂತೆ ತೀರ್ಮಾನಿಸಿದೆ;

> ‘‘ಇದರಲ್ಲಿ ಬಟ್ಟೆ ಗಿರಣಿಯು ಕಾರ್ಖಾನೆಯ ಪ್ರವರ್ಗಕ್ಕೆ ಸೇರುತ್ತದೆ. ಮೊದಲನೆಯ ಸಂದರ್ಭದಲ್ಲಿ ಉದ್ಯೋಗದಾತನು ಯಾವುದೇ ಇತರ ವ್ಯಕ್ತಿಗೆ ವಹಿಸಲಾದ ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣ ಹೊಂದಿರುವ ವ್ಯಕ್ತಿಯಾಗಿದ್ದು, ಯಾವುದೇ ಹೆಸರಿನಿಂದ ಕರೆಯಲಾಗುವ ಅಂಥ ವ್ಯಕ್ತಿಯನ್ನು ಉದ್ಯೋಗದಾತನೆಂದು ಪರಿಗಣಿಸುವುದು. ಸದ್ಯದ ಮೊಕದ್ದಮೆಯಲ್ಲಿ ನೌಕರನು ನಿವೃತ್ತನಾದಾಗ, ಬಟ್ಟೆ ಗಿರಣಿಯ ಮಾಲೀಕರು, ನಿಶ್ಚಿತವಾಗಿ ಕಾರ್ಖಾನೆಯ ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣ ಹೊಂದಿರುವ ವ್ಯಕ್ತಿಗಳಾಗಿದ್ದರು. ಉದ್ಯೋಗದಾತರು ಸಹ ಅವರೇ ಆಗಿರುತ್ತಾರೆ. ವಾದ ವಿವಾದಗಳ ದೃಷ್ಟಿಯಿಂದ ಹೇಳುವುದಾದರೆ, ಇದರಲ್ಲಿ ಅಭಿರಕ್ಷಕನನ್ನು (ಕಸ್ಟೋಡಿಯನ್) ಉದ್ಯೋಗದಾತನೆಂದು ಸಹ ಪರಿಗಣಿಸಬಹುದೆಂದು ಮತ್ತು ಇಲ್ಲಿನ ನೇಮಕಾತಿ ದಿನಾಂಕಕ್ಕಿಂತ ಮುಂಚೆಯೇ ಉಪದಾನಕ್ಕೆ ಸಂಬಂಧಿಸಿದಂತೆ ಹೊಣೆಗಾರಿಕೆಯು ಪ್ರಾಪ್ತವಾಗಿದೆಯೆಂದು, ಚರ್ಚೆಗೆ ಆಸ್ಪದವಿಲ್ಲದೆ, 3(7) ಪ್ರಕರಣವು ಇನ್ನೂ ಅನ್ವಯಿಸುತ್ತದೆಯೆಂದು ಹೇಳಲಾಗಿದೆ. ಉದ್ಯೋಗದಾತರು ಟೆಕ್ಸ್‌ಟೈಲ್ ಮಿಲ್ ಆಗಿದ್ದು, ಹೊಣೆಗಾರಿಕೆಯು, ನೇಮಕಾತಿ ದಿನಾಂಕಕ್ಕಿಂತ ಮುಂಚೆ ಪ್ರಾಪ್ತವಾಗಿರುತ್ತದೆಯೆಂದು ಅಧೀನ ಪ್ರಾಧಿಕಾರಿಗಳು ಪ್ರವರ್ಗೀಯ ನಿರ್ಣಯಗಳನ್ನು ನೀಡಿದ್ದಾರೆಂದು ನಮೂದಿಸುವುದು ಅನುಚಿತವಾಗದಿರಬಹುದು. ಈ ನಿರ್ಣಯಗಳನ್ನು ನಮ್ಮ ಮುಂದೆ ಗಂಭೀರವಾಗಿ ಪ್ರಶ್ನಿಸಿಯೂ

ಇಲ್ಲ ಅಥವಾ ನಾವು ರಿಟ್ ಅಧಿಕಾರ ವ್ಯಾಪ್ತಿಯಲ್ಲಿ ಅವರೊಂದಿಗೆ ಹಸ್ತಕ್ಷೇಪ ಮಾಡಲು ಇಚ್ಛಿಸಿಯೂ ಇಲ್ಲ."

10. ಸದ್ಯದ ಮೊಕದ್ದಮೆಯಲ್ಲಿ 3 ಮತ್ತು 4ನೇ ಪ್ರತ್ಯಪೀಲುದಾರರು ಮೊದಲ ಅಪೀಲುದಾರನೊಂದಿಗೆ ಕೆಲಸ ಮಾಡುತ್ತಿದ್ದಷ್ಟು ಕಾಲವೂ ಕಾರ್ಯಸಂಸ್ಥೆಯ ವ್ಯವಹಾರಗಳ ಮೇಲಿನ ಅಂತಿಮ ನಿಯಂತ್ರಣವು 1ನೇ ಅಪೀಲುದಾರನದಾಗಿತ್ತು. ಸದರಿ ಕಾರ್ಯಸಂಸ್ಥೆಯನ್ನು ಮೊದಲನೇ ಪ್ರತ್ಯಪೀಲುದಾರನಿಗೆ ಹಸ್ತಾಂತರಿಸಿದ ನಂತರವೇ ಅಂದರೆ, 9.10.2003ರಿಂದ ಜಾರಿಗೆ ಬರುವಂತೆ, ಮೊದಲ ಪ್ರತ್ಯಪೀಲುದಾರನು ಉದ್ಯೋಗದಾತನಾಗಿದ್ದಾನೆ. ಆದುದರಿಂದ, 3 ಮತ್ತು 4ನೇ ಪ್ರತ್ಯಪೀಲುದಾರರ ಪ್ರಾರಂಭಿಕ ನೇಮಕಾತಿ ದಿನಾಂಕದಿಂದ ಕಾರ್ಯಸಂಸ್ಥೆಯನ್ನು ಮೊದಲನೇ ಪ್ರತ್ಯಪೀಲುದಾರನಿಗೆ ವರ್ಗಾಯಿಸುವವರೆಗೂ ಮೊದಲ ಅಪೀಲುದಾರನು ಅವರ ಉದ್ಯೋಗದಾತನಾಗಿದ್ದಾನೆ. ಆದುದರಿಂದ, ಮಾನ್ಯ ಏಕ ಸದಸ್ಯ ಪೀಠ ನ್ಯಾಯಾಧೀಶರು, 3 ಮತ್ತು 4ನೇ ಪ್ರತ್ಯಪೀಲುದಾರರಿಗೆ ಅವರ ಪ್ರಾರಂಭಿಕ ನೇಮಕಾತಿ ದಿನಾಂಕದಿಂದ 9.10.2013ರವರೆಗೆ ಅಪೀಲುದಾರರು ಉಪದಾನ ಸಂದಾಯ ಮಾಡಬೇಕೆಂದು ಸರಿಯಾಗಿಯೇ ನಿರ್ದೇಶಿಸಿದ್ದಾರೆ.

11. ಫಲಿತಾಂಶವಾಗಿ, ಅಪೀಲು ವಿಫಲವಾಗಿದೆ ಮತ್ತು ತದನುಸಾರವಾಗಿ ಅದನ್ನು ವಜಾ ಮಾಡಲಾಗಿದೆ. ಯಾವುವೇ ವೆಚ್ಚಗಳಿಲ್ಲ.